ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 02 ಸಿಡಿಸಿ (2) 2018–19 1966

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು–560 001
ದಿನಾಂಕ:18–06–2018

## –:ನಿರಾಕ್ಷೇಪಣಾ ಪತ್ರ:–

ವಿಷಯ: 2018–19ನೇ ಸಾಲಿನಲ್ಲಿ ಪೂರ್ಣಕಾಲಿಕ/ಅರೆಕಾಲಿಕ ನೆಲೆಯಲ್ಲಿ ಎಂ.ಟೆಕ್.,/ಎಂ.ಇ., ಉನ್ನತ ವ್ಯಾಸಂಗದ ಸಲುವಾಗಿ PGCET-2018ಗೆ ಅರ್ಜಿ ಸಲ್ಲಿಸಲು ಹಾಗೂ ಪರೀಕ್ಷೆ ಬರೆಯಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ: ವಿವಿಧ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಂದ ಬಂದ ಮನವಿ ಪತ್ರಗಳು.

******

2018–19ನೇ ಸಾಲಿನಲ್ಲಿ ಕ್ಯೂಐಪಿ ಯೋಜನೆಯಡಿ ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್.,/ಎಂ,ಇ., ಉನ್ನತ ವ್ಯಾಸಂಗದ ಸಲುವಾಗಿ PGCET-2018ಗೆ ಅರ್ಜಿ ಸಲ್ಲಿಸಲು ಹಾಗೂ ಪರೀಕ್ಷೆ ಬರೆಯಲು ಮಾತ್ರ ಈ ಕೆಳಕಂಡ ಉಪನ್ಯಾಸಕರುಗಳಿಗೆ ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇಲ್ಲವೆಂದು ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

| ಕ್ರ.ಸಂ | ಹೆಸರು<br>ಶ್ರೀ/ಶ್ರೀಮತಿ | ವಿಭಾಗ | ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ |
|---|---|---|---|
| 1 | ಸುನಂದ ಟಿ ಹೆಚ್ | ಯಾಂತ್ರಿಕ | ಸರ್ಕಾರಿ ಪಾಲಿಟೆಕ್ನಿಕ್, ಬೀಳಗಿ |
| 2 | ಹುಚ್ಚೇಶ ಶಿನ್ನೂರ | ಯಾಂತ್ರಿಕ | ಸರ್ಕಾರಿ ಪಾಲಿಟೆಕ್ನಿಕ್, ಬೀಳಗಿ |
| 3 | ದಿವ್ಯಾ ಬಿ ಜೆ | ಯಾಂತ್ರಿಕ | ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸೀಪುರ |
| 4 | ಅಮೃತ ಕೆ ಆರ್ | ಸಿವಿಲ್ | ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸೀಪುರ |
| 5 | ಅಮರ್ ಸಿ | ಆಟೋಮೊಬೈಲ್ | ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು |
| 6 | ರಮೇಶ್ ಎನ್ | ಯಾಂತ್ರಿಕ | ಸರ್ಕಾರಿ ಪಾಲಿಟೆಕ್ನಿಕ್, ಬಂಕಾಪುರ |

ಕೆ.ಸಿ.ಎಸ್.ಆರ್. ನಿಯಮ 61(3) ಹಾಗೂ ಅಪೆಂಡಿಕ್ಸ್ 2ಎ ನಿಯಮ Iರ ಉಪನಿಯಮ (1) ರಿಂದ (10)ರನ್ವಯ ಮತ್ತು ಅಪೆಂಡಿಕ್ಸ್ 2ಎ ನಿಯಮ IIರ ಉಪನಿಯಮ (1) ರಿಂದ (5)ರನ್ವಯ ಪೂರ್ಣಕಾಲಿಕ ನೆಲೆಯಲ್ಲಿ M.E/M.Tech (FullTime) ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರು ಐದು ವರ್ಷಗಳ ಸಕ್ರಮ ಸೇವೆಯನ್ನು ಹಾಗೂ ಅರೆಕಾಲಿಕ ನೆಲೆಯಲ್ಲಿ M.E/M.Tech (QIP/Part Time) ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರು ಮೂರು ವರ್ಷಗಳ ಸಕ್ರಮ ಸೇವೆಯನ್ನು ಹಾಗೂ ಖಾಯಂ ಪೂರ್ವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರಬೇಕು ಮತ್ತು ವಯೋಮಿತಿ 48 ವರ್ಷದ ಒಳಗಿರಬೇಕು.

ಪ್ರಾಚಾರ್ಯರು, 2018-19ನೇ ಸಾಲಿನಲ್ಲಿ ಪೂರ್ಣಕಾಲಿಕ/ಅರೆಕಾಲಿಕ ನೆಲೆಯಲ್ಲಿ ಎಂ.ಟೆಕ್/ಎಂ.ಇ ಉನ್ನತ ವ್ಯಾಸಂಗದ ಸಂದರ್ಶನಕ್ಕೆ ಆಯ್ಕೆಗೊಂಡ ಉಪನ್ಯಾಸಕರುಗಳ ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಖಾಯಂ ಪೂರ್ವಾವಧಿ ಘೋಷಣೆಯ ಮಾಹಿತಿ ಹಾಗೂ ವಿಭಾಗದಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರು ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳೊಂದಿಗೆ ಸದರಿಯವರ ನಿಯೋಜನೆಯಿಂದ ಸಂಸ್ಥೆಯ ವಿಭಾಗದ ಹಾಗೂ ದೈನಂದಿನ ಶೈಕ್ಷಣಿಕ ಕೆಲಸ ಕಾರ್ಯಗಳಿಗೆ ಯಾವುದೇ ತೊಂದರೆಯಾಗುವುದಿಲ್ಲವೆಂದು ಹಾಗೂ ಸದರಿಯವರು ಈ ಹಿಂದೆ ಯಾವುದೇ ಉನ್ನತ ವ್ಯಾಸಂಗದ ಪೂರ್ಣಕಾಲಿಕ ನಿಯೋಜನೆ ಸೌಲಭ್ಯವನ್ನು ಪಡೆದಿರುವುದಿಲ್ಲವೆಂದು ದೃಢೀಕರಿಸಿ ಪ್ರಸ್ತಾವನೆಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ಸದರಿ ನಿರಾಕ್ಷೇಪಣಾ ಪತ್ರವೇ ಅಂತಿಮ ಅನುಮತಿ ಪತ್ರ ಎಂದು ಪರಿಗಣಿಸಬಾರದು. ಪೂರ್ಣಕಾಲಿಕ/ಅರೆಕಾಲಿಕ ನೆಲೆಯ ಎಂ.ಟೆಕ್.,/ಎಂ.ಇ ಉನ್ನತ ವ್ಯಾಸಂಗದ ಸಂದರ್ಶನಕ್ಕೆ ಆಯ್ಕೆಗೊಂಡ ಉಪನ್ಯಾಸಕರು ಇಲಾಖೆಯಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಸಂದರ್ಶನಕ್ಕೆ ಹಾಜರಾಗಲು ಸೂಚಿಸಲಾಗಿದೆ.

**ಜಂಟಿ ನಿರ್ದೇಶಕರು(ಸಿಡಿಸಿ)**

ಇವರಿಗೆ:

1. ಸಂಬಂಧಪಟ್ಟ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.

ಪ್ರತಿ: ಮೇಲ್ಕಂಡ ಉಪನ್ಯಾಸಕರುಗಳಿಗೆ – ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರ ಮುಖಾಂತರ.